Mr. SPEAKER.—In consultation with the Leader of the House and the Leader of the Opposition, I will come to a decision.

Introduction of Bills.

Sri K. HANUMANTHAIYA (Chief Minister).—Sir, I introduce the Mysore High Court (Amendment) Bill, 1952, which was published in the *Mysore Gazette* Extraordinary dated June 19, 1952 under Rule 48 of the Rules of Procedure and Conduct of Business in the Mysore Legislative Assembly.

Sri A. G. RAMACHANDRA RAO (Minister for Law and Education).—Sir, I introduce (1) The Mysore University (Amendment) Bill, 1952, (2) The Mysore Court Fees (Amendment) Bill, 1952, (3) The Mysore Legislature Salaries Bill, 1952, which were published in the *Mysore Gazette* Extraordinary dated 19th June 1952 and (4) The Mysore Maternity Benefit Bill, 1952, which was published in the *Mysore Gazette* Extraordinary dated 11th June 1952 under Rule 48 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Ministers' Salaries and Allowances Bill, 1952 is not yet published in the Gazette. Perhaps it may be taken up tomorrow.

Sri T. CHANNIAH (Minister for Public Health and Local Self-Government).—Sir, I introduce the Mysore Kolar Gold Fields Municipal Bill, 1952 which was published in the *Mysore Gazette* Extraordinary, dated June 6, 1952 under Rule 48 of the Rules of Procedure and Conduct of Business in the Mysore Legislative Assembly.

Debate on Motion of Thanks to His Highness the Maharaja.

Mr. SPEAKER.—The debate on the Motion of Thanks to His Highness the Maharaja will be now resumed. I call upon Sri V. Venkatappa to speak.

Sri K. HANUMANTHAIYA (Leader of the House).—May I make a suggestion? Yesterday you were please to allot this day for the moving of the amendments to the Motion of Thanks. Let amendments be moved first and then the discussion on the Address may follow.

Mr. SPEAKER.—That is true. Sri V. Venkatappa just represented to me that as he has got some urgent work he would like to speak on this motion before he leaves. That is why I wanted to give him an opportunity.

Sri K. HANUMANTHAIYA.—I have no objection.

ಶ್ರೀ ವಿ. ವೆಂಕಟಪ್ಪನವರು (ಚೆನ್ನಪಟ್ಟಣ).—ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ಈ ಸಭೆಯನ್ನುದ್ದೇಶಿಸಿ ಮಾಡಿರುವ ಭಾಷಣದ ಮೇಲೆ ಈಗಾಗಲೇ ಅನೇಕ ಮಿತ್ರರು ಭಾಷಣಗಳನ್ನು ಮಾಡಿದ್ದಾರೆ. ಆದರೆ ನಾನು ಈ ವಿಷಯದಲ್ಲಿ ಭಾಷಣಮಾಡಬೇಕು ಎಂದು ಹೇಳಿ ಮನಸ್ಸುಮಾಡಿಕೊಂಡಿರಲಿಲ್ಲ. ಈ ಸಂಬಂಧದಲ್ಲಿ ಒಂದು ಮುಖ್ಯಾಂಶವನ್ನು ಸಭೆಯ ಗಮನಕ್ಕೆ ತರಬೇಕಾದುದು ಅವಶ್ಯಕವೆಂದು ಕಂಡು ಬಂದುದರಿಂದ ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮನ್ಮಹಾರಾಜರವರು ಆಹಾರಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಹೇಳಿರತಕ್ಕಂಥ ಒಂದು ವಿಷಯ ಬಹಳಮಟ್ಟಿಗೆ ಎಲ್ಲರಿಗೂ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ. ಅವರು ಈ ರೀತಿ ಹೇಳಿದ್ದಾರೆ.

> "ಸಂಸ್ಥಾನದಲ್ಲಿ ಶಾಸನಬದ್ಧವಾದ ಪಡಿತರ ಪದ್ಧತಿಯು ಆಚರಣೆಯಲ್ಲಿರುವ ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲೆಲ್ಲಾ ಆಹಾರ ಧಾನ್ಯಗಳು ಸ್ಥಳದಿಂದ ಸ್ಥಳಕ್ಕೆ ಸಾಗುವ ವಿಷಯದಲ್ಲಿದ್ದ ನಿರ್ಬಂಧಗಳನ್ನು ಸರ್ಕಾರದವರು ತೆಗೆದುಹಾಕಿದುದರಿಂದ ಸಂಸ್ಥಾನದ ಪ್ರಜೆಗಳಿಗೆ ವಿಶೇಷ ಹೆಚ್ಚಿನ ಸಹಾಯವಾಗಿರುವುದಲ್ಲದೆ, ಅವರ ಮನಸ್ಸಿಗೆ ಉಲ್ಲಾಸವೂ ತೃಪ್ತಿಯೂ ಉಂಟಾಗಿವೆ."

ಎಂದು ತಿಳಿಸಿದ್ದಾರೆ. ಇದು ಸ್ವಾಭಾವಿಕವಾಗಿ ಸಂತೋಷವನ್ನುಂಟುಮಾಡುವ ವಿಷಯ ಆಹುದು. ಈ ಆಹಾರ ಹತೋಟಿಗೆ ಸಂಬಂಧಪಟ್ಟ ಆಜ್ಞೆಗಳಿಗೊಳಗಾಗಿದ್ದ ತೊಂದರೆಗಳನ್ನು ಅನುಭವಿಸುತ್ತಿದ್ದ ಜನರಿಗೆ, ಈ ಆಜ್ಞೆಗಳನ್ನು ತೆಗೆದುಹಾಕಿದ್ದರಿಂದ ಅವರೆಲ್ಲರಿಗೂ ಸಂತೋಷವುಂಟಾಗಿರಬೇಕೆಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಆಹಾರ ಹತೋಟಿ ಆಜ್ಞೆಯಿಂದ ಜನರು ಏನೇನು ಕಷ್ಟಗಳನ್ನು ಅನುಭವಿಸಿದರೆಂಬುದನ್ನು ಈಗ ಪ್ರಸ್ತಾಪಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಒಂದು ಅಂಶವೇನೆಂದರೆ—ಈ ಕಂಟ್ರೊಲುಗಳನ್ನೆಲ್ಲಾ ತೆಗೆದುಹಾಕಬೇಕೆಂದು ಹೇಳುವ ಸಂತೋಷದ ಭರದಲ್ಲಿ ಈ ಬಗ್ಗೆ ಅತ್ಯಗತ್ಯವಾಗಿ ಅನುಸರಿಸಬೇಕಾದ ಆವಶ್ಯಕವಾದ ವಿಚಾರಗಳನ್ನೆಲ್ಲ ಅವರು ಮರೆತುಬಿಡುತ್ತಾರೋ ಏನೋ ಎನ್ನಿಸುತ್ತಿದೆ.